ಒಪ್ಪಲೇ ಇಲ್ಲ. ಒಳಗೆ ಹೋದೆ. ಕಿರು ಜಗುಲಿ. ಗೋಡೆ ಬದಿಯಲ್ಲಿ ಮರದ ಒಂದು ಕುರ್ಚಿ. ಅದರ ಎದುರು ಒಂದು ಪುಟ್ಟ ಸ್ಟೂಲು. ನೆಲದ ಮೇಲೆ ಹಾಸಿದ್ದ ಚಾಪೆ.

'ಕುಳಿತ್‌ಕೊಳ್ಳಿ. ಬಡವರ ಮನೆ' ಆ ಯುವತಿ ಸಂಕೋಚದಿಂದ ಮುದುಡುತ್ತಾ ಅಂದಳು.

ಚಾಪೆಯ ಮೇಲೆ ಕುಳಿತೆ. ಕೈಯಲ್ಲಿದ್ದ ಬ್ಯಾಗ್‌ನ್ನು ಪಕ್ಕದಲ್ಲಿಟ್ಟುಕೊಂಡೆ.

'ಬಿಸಿಲು ಜೋರಾಗಿದೆ. ನಿಮಗೆ ಕುಡಿಯಲು ತಂಪಾಗಿ ಏನಾದರೂ ಕೊಡಲಾ?' ಆ ಯುವತಿ ಕೇಳಿದಳು.

ಯುವತಿಯತ್ತ ನೋಡಿದೆ. ನಿಜಕ್ಕೂ ಸುಂದರಿ. ಹೇಮಾಳಂತೆಯೇ ಅಗಲವಾದ ಕಣ್ಣುಗಳು. ಹೇಮಾಳಷ್ಟು ಎತ್ತರದವಳಲ್ಲ. ಹಾಗಂತ ತೀರಾ ಕುಳ್ಳಿಯೂ ಅಲ್ಲ. ಸರಿ ಸಮ ಎತ್ತರದವಳು. ನನಗೆ ತಿಳಿದಂತೆ ಆಂಜನೇಯಪ್ಪ ಮೇಷ್ಟ್ರಿಗೆ ಹೇಮಾ ಒಬ್ಬಳೇ ಹೆಣ್ಣು ಮಗಳು. ಉಳಿದಿಬ್ಬರು ಗಂಡು ಮಕ್ಕಳು: ಶ್ರೀಕಂಠ, ಶಿವಾನಂದ. ಈಕೆ... ಆ ಶ್ರೀಕಂಠ ಅಥವಾ ಶಿವಾನಂದನ? ಆ ಯುವತಿಯ ಕತ್ತು ನೋಡಿದೆ. ತಾಳಿ ಇರಲಿಲ್ಲ! ಅಂದರೆ... ಇನ್ನೂ ಮದುವೆಯಾಗಿಲ್ಲ! ಆ ಯುವತಿ ಒಳಗೆ ಹೋದಳು. ಒಂದೆರಡು

